**ಸಾಕ್ಷಿಗೆ ದಿನಾಂಕ: 25.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:**

**ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ.Akshara Hegde ವಕೀಲರಿಂದ:**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ. ನನ್ನ ಹೇಳಿಕೆಗೆ ಸರಿಯಾಗಿ ನಮ್ಮ ವಕೀಲರು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿದ್ದಾರೆ.

2) **2** ನೇ ಎದುರುದಾರರಾದ ಶ್ರೀಮತಿ.ನಳಿನ ರವರು ಬರೆದುಕೊಟ್ಟಿರುವ ಜಿ.ಪಿ.ಎ ಪತ್ರವನ್ನು ನಿ.ಆರ್.**2** ಎಂದು ಗುರುತಿಸಿದೆ.

3) **KA-51-AB-2229** ಸಂಖ್ಯೆಯ ವಾಹನಕ್ಕೆ ಸಂಬಂಧಿಸಿದಂತಹ ವಿಮಾ ಪಾಲಿಸಿಯನ್ನು ನಿ.ಆರ್.**3** ಎಂದು ಗುರುತಿಸಿದೆ.

4) ಈಗ ಸಾಕ್ಷಿದಾರರು ಪ್ರದೀಪ ರವರ ಮೂಲ ಚಾಲನಾ ಪರವಾನಗಿ ಮತ್ತು **KA-51-AB-2229** ಸಂಖ್ಯೆಯ ವಾಹನದ ಮೂಲ ಆರ್.ಸಿ. ಕಾರ್ಡ್ ದಾಖಲೆ ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ

ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಆರ್.4 ಮತ್ತು ನಿ.ಆರ್.5 ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

**ಈ ಹಂತದಲ್ಲಿ ಮತ್ತೆ ಕೆಲವು ದಾಖಲೆಗಳನ್ನು ಹಾಜರುಪಡಿಸಲು ಸಾಕ್ಷಿದಾರರು ಸಮಯ ಕೇಳಿದ್ದಾರೆ, ಸಮಯ ನೀಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.